

# ಶ್ರೀ ಸುಬ್ರಹ್ಮಣ್ಯ ಸಭಾ (ರಿ), ಮಂಗಳೂರು

ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಕರಂಗಲಪಾಡಿ, ಮಂಗಳೂರು

## ಶತಮಾನೋತ್ಸವ ಸಂಭ್ರಮ

### ಮಂಗಳೂರಲ್ಲಿ ಶತಮಾನೋತ್ಸವ ಸಮಾರೋಪದ ಉದ್ಘಾಟನೆ

(...1ನೇ ಪುಟದಿಂದ)

ಉಳಿದುಕೊಂಡಿದೆ. ಅದನ್ನು ಮತ್ತಷ್ಟು ಪೋಷಿಸಿ ಬೆಳೆಸೋಣ” ಎಂದು ಸೇರಿದವರಿಗೆ ಕಿವಿಮಾತು ಹೇಳಿದರು.



“ಜಗದ್ಗುರು ಶೃಂಗೇರಿ ಸಂಸ್ಥಾನಕ್ಕೂ ಸ್ಥಾನಿಕ ಬ್ರಾಹ್ಮಣ ಸಮಾಜಕ್ಕೂ ಅತಿ ಪ್ರಾಚೀನವಾದ ಸಂಬಂಧವಿದೆ. ಶೃಂಗೇರಿ ನಮ್ಮ ಗುರುಪೀಠವೆಂದು ಸ್ಥಾನಿಕ ಬ್ರಾಹ್ಮಣರು ಹೆಮ್ಮೆಯಿಂದ ಹೇಳಿಕೊಳ್ಳುವ ಬಗ್ಗೆ ನಮಗೆ ಅತ್ಯಂತ ಸಂತೋಷವಿದೆ. ಶತಮಾನದ ನೆನಪಿಗಾಗಿ ಈ ಸುಂದರ ಕಟ್ಟಡವನ್ನು ನಿರ್ಮಿಸಿ ಬಹುದೊಡ್ಡ ಕೆಲಸ ಮಾಡಿದ್ದೀರಿ. ಆದಕ್ಕಾಗಿ ನೆರವು ನೀಡಿದ ವಿವಿಧ ಸಂಘ-ಸಂಸ್ಥೆಗಳು ಹಾಗೂ ಎಲ್ಲ ದಾನಿಗಳನ್ನೂ, ಇಲ್ಲಿ ನೆರೆದ ಎಲ್ಲಾ ಭಕ್ತ ಬಾಂಧವರನ್ನೂ, ಪ್ರೀತಿಪೂರ್ವಕವಾಗಿ ಆಶೀರ್ವಚಿಸುತ್ತೇವೆ” ಎಂದು ಗುರುಗಳು ತಮ್ಮ ಆಶೀರ್ವಚನದಲ್ಲಿ ನುಡಿದರು.

**ಗಮನಸೆಳೆದ ಮೆರವಣಿಗೆ**

ಸಂಜೆ ಗಂಟೆ 6ಕ್ಕೆ ಕುಂದಾಪುರದಿಂದ ಆಗಮಿಸಿದ ಶ್ರೀ ಶ್ರೀಗಳಿಗೆ ಮಂಗಳೂರು ಪಾಲ್ಕೆ ಕೃಷ್ಣಾಚಾರ್ ಹಾಲ್‌ನಲ್ಲಿ ನೆರೆದಿದ್ದ ಸಮಾಜ ಬಾಂಧವರು ಪೂರ್ಣಕುಂಭ ಸ್ವಾಗತ ನೀಡಿ ಸ್ವಾಗತಿಸಿದರು. ಅನಂತರ ಅಲಂಕೃತಗೊಂಡ ತೆರೆದ ವಾಹನದಲ್ಲಿ ಶ್ರೀಗಳನ್ನು ಕುಳ್ಳಿರಿಸಿ ಭವ್ಯ ಮೆರವಣಿಗೆಯು ಸಾಗಿತು. ಗೊಂಬೆನೃತ್ಯ, ಕೀಲುಕುದುರೆ, ಯಕ್ಷಗಾನ, ವಾಲಗ, ಕೊಂಬು ಮೊದಲಾದವುಗಳ ಸಹಿತ ನಗರದ ನೂರಾರು ಜನರು ಮೆರವಣಿಗೆಯಲ್ಲಿ ಪಾಲ್ಗೊಂಡರು. ಸುಮಾರು 7 ಗಂಟೆಗೆ ಸುಬ್ರಹ್ಮಣ್ಯ ಸಭಾದೊಳಗೆ ಮೆರವಣಿಗೆ ಬಂದು ಮುಟ್ಟಿತು. ಅಲ್ಲಿ ಶ್ರೀಗಳಿಗೆ ಧೂಳಿ ಪಾದಪೂಜೆ, ಪಾದಪೂಜೆ ಮೊದಲಾದವುಗಳು ನೆರವೇರಿತು. ಸುಮಾರು 200 ಜನ ಶ್ರೀಗಳ ಪಾದಪೂಜೆ ಮಾಡಿ ಕೃತಕೃತ್ಯರಾದರು.

ಇದೇ ವೇದಿಕೆಯಲ್ಲಿ ಶತಮಾನೋತ್ಸವ ಸಮಾರಂಭಕ್ಕೆ ಹಾಗೂ ಕಟ್ಟಡ ನಿಧಿಗೆ ದಾನ ನೀಡಿದ ಗಣ್ಯರನ್ನು ಶ್ರೀಗಳ ಸಮ್ಮುಖದಲ್ಲಿ ಗೌರವಿಸುವ ಕಾರ್ಯಕ್ರಮ ನೆರವೇರಿತು. ಸುಬ್ರಹ್ಮಣ್ಯ ಸಭಾದ ಅಧ್ಯಕ್ಷ ಶ್ರೀ ಜಗನ್ನಿವಾಸರಾವ್, ಕಾರ್ಯದರ್ಶಿ ಶ್ರೀ ಕರುಣ್‌ರಾವ್ ಬೆಳ್ಳೆ, ಶತಮಾನೋತ್ಸವ ಸಮಿತಿಯ ಅಧ್ಯಕ್ಷ ಶ್ರೀ ಎಮ್.ಆರ್.ವಾಸುದೇವ್, ಕಾರ್ಯದರ್ಶಿ ಡಾ। ಎ.ಪಿ.ಕೃಷ್ಣ ಮೊದಲಾದವರು ಉಪಸ್ಥಿತರಿದ್ದರು.

ತಾ.10-05-2008ರಂದು ಸಂಜೆ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಶ್ರೀ ಶಂಕರ ಜಯಂತಿಯ ಆಚರಣೆಯೊಂದಿಗೆ ನೂತನ ಕಟ್ಟಡದ ವಾಸ್ತುಪೂಜೆ, ಹೋಮ, ಇತ್ಯಾದಿ ಧಾರ್ಮಿಕ ವಿಧಿಗಳು ನೆರವೇರಿತು.

ತಾ.11-05-2008ರಂದು ಬೆಳಿಗ್ಗೆ ಗಂಟೆ 7-00ರಿಂದ ಗಣಹೋಮ, ನವಗ್ರಹ ಹೋಮ, ಶ್ರೀ ಸುಬ್ರಹ್ಮಣ್ಯ ಹೋಮ, ಶ್ರೀ ಚಂಡಿಕಾ ಪಾರಾಯಣ ಮೊದಲಾದ ಪೂಜಾ ಕಾರ್ಯಕ್ರಮ ಗಳು ಪ್ರಾರಂಭಗೊಂಡವು. ಮಧ್ಯಾಹ್ನ ಬ್ರಾಹ್ಮಣ ಸುಹಾಸಿನಿ ಆರಾಧನೆ ನೆರವೇರಿತು.

ತಾ.12ರಂದು ಬೆಳಿಗ್ಗೆ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳಿಗೆ ಭಿಕ್ಷಾವಂದನೆ, ಪಾದಪೂಜೆ ಬಳಿಕ ಶ್ರೀ ಶ್ರೀಗಳ ಉಪಸ್ಥಿತಿಯಲ್ಲಿ ಶ್ರೀ ಚಂಡಿಕಾ ಯಾಗದ ಪೂರ್ಣಾಹುತಿಯು ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳವರ ನೇತೃತ್ವದಲ್ಲಿ ನೆರವೇರಿತು. ಸಂಜೆ 4 ಗಂಟೆಗೆ ನಡೆದ ಬ್ರಾಹ್ಮಣ ಸಮಾವೇಶದಲ್ಲಿ ವಿವಿಧ ಬ್ರಾಹ್ಮಣ ಸಂಘಟನೆಗಳ ಪದಾಧಿಕಾರಿಗಳನ್ನು ಗುರುತಿಸಿ ಗೌರವಿಸುವ ಕಾರ್ಯಕ್ರಮವೂ, ಬಳಿಕ ಜಗದ್ಗುರುಗಳಿಂದ ಆಶೀರ್ವಚನವೂ, ವಿವಿಧ ಗಣ್ಯರ ಸಮ್ಮುಖದಲ್ಲಿ ನೆರವೇರಿತು.


**ಶತಮಾನೋತ್ಸವ ಸಂಭ್ರಮಕ್ಕೆ ಶುಭಕೋರುವ**

| | | | | |
|---|---|---|---|---|
| **Sharekhan**<br>**Navadurga Share Services**<br>Mangalore-575 101<br>Prop. :PRADEEP RAO K.<br>Tel. : 2441318/2412901/02/03/20/21 | **RAMA** Automobiles<br>Mangalore-575 006.<br>Prop. :U. SANTHOSH KUMAR<br>Tel. :2454355 | **SUMAN PUBLICATIONS**<br>Mangalore-575 027<br>SMT.SUMAN KRISHNA<br>Proprietor | VISHRAM MOTORS (P) Ltd.<br>Mangalore-575 003.<br>ANIL RAO B. S.<br>Managing Director<br>Tel. :2440110 (O), 2213946 (R) | **NAVA** COMPUTERS<br>Mangalore -5<br>Prop. :MANISH RAO U.<br>Mobile : 94487 26499 |


ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

**ಇದರ ಶತಮಾನೋತ್ಸವ ಸಮಾರಂಭಗಳು**

ಯಶಸ್ವಿಯಾಗಿ ನೆರವೇರಿದ ಈ ಸಂದರ್ಭದಲ್ಲಿ

ಶತಮಾನೋತ್ಸವ ಸಮಿತಿ, ಸುಬ್ರಹ್ಮಣ್ಯ ಸಭಾ ಮಂಗಳೂರು

ಹಾಗೂ ಸಮಾಜದ ಸಮಸ್ತರಿಗೆ ಹಾರ್ದಿಕ ಅಭಿನಂದನೆಗಳು

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ**

**ಶ್ರೀಶಾರದಾ ಪತ್ರಿಕೆ**

**ಶ್ರೀಶಾರದಾ ಕೋ-ಆಪರೇಟಿವ್ ಸೊಸೈಟಿ ನಿ., ಉಡುಪಿ**

*ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭೆಯ ಶತಮಾನೋತ್ಸವ ಸಂಭ್ರಮದ*
*ವರ್ಷಪೂರ್ತಿ ನಡೆದ ವಿವಿಧ ಕಾರ್ಯಕ್ರಮಗಳ ವರದಿ,*
*ಛಾಯಾಚಿತ್ರ, ಮೊದಲಾದವುಗಳನ್ನು ಕಾಲಕಾಲಕ್ಕೆ ಒದಗಿಸಿಕೊಟ್ಟ*
*ಸುಬ್ರಹ್ಮಣ್ಯ ಸಭೆಯ ಪದಾಧಿಕಾರಿಗಳಿಗೆ ಮತ್ತು*
*ಶತಮಾನೋತ್ಸವ ಸಮಿತಿಯ ಪದಾಧಿಕಾರಿಗಳಿಗೆ ಹಾಗೂ*
*ಸಮಾಜದ ಎಲ್ಲಾ ಬಂಧುಗಳಿಗೆ*

**ಶ್ರೀಶಾರದಾ**

*ಅನಂತ ಕೃತಜ್ಞತೆಗಳನ್ನು ಅರ್ಪಿಸುತ್ತದೆ.*

## ಉಡುಪಿಯಲ್ಲಿ
## ಡಾ। ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನ
### ಅರ್ಜಿ ಆಹ್ವಾನ

ಡಾ। ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು “ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ”ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಇದಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. 2008-2009ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು. ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ತಮ್ಮ ಹೆಸರು, ರಕ್ಷಕರ ಹೆಸರು, ಪರೀಕ್ಷೆಯ ಅಂಕಪಟ್ಟಿ ಹಾಗೂ ವಿದ್ಯಾಭ್ಯಾಸ ಮಾಡುವ/ಮುಂದುವರಿಸುವ ಬಗ್ಗೆ ದಾಖಲೆಯೊಂದಿಗೆ (ವ್ಯಾಸಂಗ ಪ್ರಮಾಣ ಪತ್ರ) ಈ ಕೆಳಗಿನ ವಿಳಾಸಕ್ಕೆ ತಾ.1-8-2008ರ ಒಳಗೆ ತಲಪುವಂತೆ ಕಳುಹಿಸಬೇಕು. (ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರಗಳೊಂದಿಗೆ ಮತ್ತೆ ಅರ್ಜಿ ಸಲ್ಲಿಸುವುದು.)

**ಸಂಚಾಲಕರು,** ವಿದ್ಯಾರ್ಥಿ ವೇತನ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),
ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿ - 576 102. ಫೋನ್ : 0820-2520754